ಆಳಂದ್ ತಾಲ್ಲೂಕಿನ ಅವಂಜಿರ್ಗಾ ಅಣೆಕಟ್ಟು ಯೋಜನೆ

ಶ್ರೀಳಿ ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ಕಂದಾಯ ಮಂತ್ರಿ ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಳಂದ್ ತಾಲ್ಲೂಕಿನ ಅವಂಜಿರ್ಗಾ ಅಣೆಕಟ್ಟು ಯೋಜನೆಗೆ ಕಳೆದ ವರ್ಷ ಒದಗಿಸಿದ ಹಣವೆಷ್ಟು ಹಾಗೂ ವೆಚ್ಚವಾಗಿರುವ ಹಣವೆಷ್ಟು,

ಆ) ಟೆಂಡರ್ ಕರೆದಿದ್ದು ಕೆಲಸವನ್ನು ಕಂಟ್ರಾಕ್ಟರರಿಗೆ ವಹಿಸಿದ್ದರೂ ಕೂಡ ಕೆಲಸ ನಿಂತಿರುವುದಕ್ಕೆ ಕಾರಣವೇನು,

ಇ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—

ಅ) ಮೂಲ ಅನುದಾನ ೩೦೦ ಲಕ್ಷ ರೂ.ಗಳು ಹಾಗೂ ಪರಿಷ್ಕೃತ ಅನುದಾನ ೭೦ ಲಕ್ಷ ರೂಗಳು. ೧೯೮೭-೮೮ನೇ ಸಾಲಿನಲ್ಲಿ ೬೪ ಲಕ್ಷ ರೂ.ಗಳು ವೆಚ್ಚ ಮಾಡಲಾಗಿದೆ.

ಆ) ಕೋಡಿಯ ತಳಪಾಯದ ಆಗೆತದ ಕೆಲಸ ಹಾಗೂ ಒಡ್ಡಿನ ಕೆಲಸಗಳು ಪ್ರಗತಿಯಲ್ಲಿದೆ. ತಳಪಾಯದಲ್ಲಿ ಭೂಗರ್ಭ ಸಮಸ್ಯೆಗಳಿಂದ ಪರ್ಯಾಯ ಪ್ರಸ್ತಾವೆ ಪರಿಶೀಲಿಸಲಾಗುತ್ತಿದೆ.

ಇ) ಎಂಟನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ.

ಆಳಂದ್ ತಾಲ್ಲೂಕು ಲೋಕೋಪಯೋಗಿ ಇಲಾಖೆಯಲ್ಲಿ ಹಣ ದುರುಪಯೋಗವಾದ ಬಗ್ಗೆ

ಶ್ರೀ ಬಿ. ಶ್ರೀ ಶರಣಬಸಪ್ಪ ಮಾಲಿ ಪಾಟೀಲ (ಆಳಂದ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ರಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ್ ತಾಲ್ಲೂಕಿನ ಲೋ. ನಿ. ಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಜೂನಿಯರ್ ಇಂಜಿನಿಯರ್‌ಗಳು ಹಣ ದುರುಪಯೋಗ ಪಡಿಸಿಕೊಂಡಿದ್ದರ ಬಗ್ಗೆ ಅಂದಿನ ಲೋಕೋಪಯೋಗಿ ಮಂತ್ರಿಗಳು ಗುಲ್ಬರ್ಗಾಕ್ಕೆ ಬಂದ ಸಮಯದಲ್ಲಿ ಸದರಿ ವಿಷಯವನ್ನು ವಿಚಾರಣೆಗಾಗಿ ಉಪ-ಲೋಕಾಯುಕ್ತಕ್ಕೆ ವಹಿಸಲಾಗುವುದಾಗಿ ಆಶ್ವಾಸನೆ ನಿಡೀದ್ದು ನಿಜವೆ,

ಆ) ಹಾಗಿದ್ದಲ್ಲಿ ಈ ಬಗ್ಗೆ ಉಪಲೋಕಾಯುಕ್ತರು ತೆಗೆದುಕೊಂಡ ಕ್ರಮವೇನು ಮತ್ತು ಈ ವಿಚಾರಣೆ ಯಾವ ಹಂತದಲ್ಲಿದೆ.

ಇ) ಈ ಬಗ್ಗೆ ತಪಿತಸ್ಥರ ಮೇಲೆ ಕೂಡಲೆ ಸೂಕ್ತ ಕ್ರಮ ತೆಗೆದುಕೊಳ್ಳುವರೆ ?

ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಇಲಾಖೆ

ಅ) ಈ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇಲ್ಲ. ಈ ಸಂಬಂಧದಲ್ಲಿ ಶ್ರೀ ಶರಣಬಸಪ್ಪ ಮಾಲಿ ಪಾಟೀಲ ವಿಧಾನ ಸಭಾ ಸದಸ್ಯರು ದಿನಾಂಕ ೨೬-೫-೮೭ ರಂದು ನೀಡಿದ ಪತ್ರಿಕಾ ಟಿಪ್ಪಣಿ ಹಾಗು ೮-೭-೮೭ ರಂದು ಬರೆದ ಪತ್ರಗಳಲ್ಲಿ ಆರೋಪಿಸಿದ ಅವ್ಯವಹಾರಗಳ ತನಿಖೆಗಾಗಿ ಲೋಕಾಯುಕ್ತಕ್ಕೆ ಕಳುಹಿಸಿದೆ.

ಆ) ಆಳಂದ ತಾಲ್ಲೂಕಿಗೆ ಸಂಬಂಧಿಸಿದ ಅಪಾದನೆಗಳ ಬಗ್ಗೆ ತನಿಖೆಯು ಪಂಚಾಯವಾಗಿದ್ದರಿಂದ ಈಗ ತನಿಖೆಯಿಂದ ಕಂಡುಬಂದ ಅವ್ಯವಹಾರಗಳಿಗೆ ಅಪಾದಿತರು ಸಲ್ಲಿಸಿದ ಸಮಜಾಯಿಷಿಗಳು ಲೋಕಾಯುಕ್ತ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

ಇ) ಉಪಲೋಕಾಯುಕ್ತದಿಂದ ತನಿಖಾ ವರದಿ ಬಂದ ಕೂಡಲೇ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.